# 3

# ಸಭಾ ಹಿರಿಯರ ಪಾತ್ರ

ಹೊಸ ಒಡಂಬಡಿಕೆಯ ಸಭೆಯಲ್ಲಿ ಸಭಾ ಹಿರಿಯರು ಇದ್ದರೆಂಬುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ (ಅಪೊಸ್ತಲರ ಕೃತ್ಯಗಳು 11:30; 14:23; 15:6; ಫಿಲಿಪ್ಪಿ 1:1; ತೀತ 1:5; 1 ಪೇತ್ರ 5:1-5). ಹೀಗಿದ್ದರೂ, ಪ್ರತಿಯೊಬ್ಬರೂ ಅವರ ಕೆಲಸದ ಬಗ್ಗೆ ಒಪ್ಪಿಕೊಳ್ಳುವದಿಲ್ಲ. ನಾವು ಹೊಸ ಒಡಂಬಡಿಕೆಯನ್ನು ಅನುಸರಿಸಿದರೆ, ಸ್ಥಳಿಕ ಸಭೆಯಲ್ಲಿ ಹಿರಿಯರ ಕಾರ್ಯ ಇಲ್ಲವೇ ಪಾತ್ರ ಏನಾಗಿರುತ್ತದೆ? ಪರಿಶುದ್ಧಾತ್ಮನು ಹಿರಿಯರನ್ನು ಮಾಡುತ್ತಾನೆ. "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಿಮ್ಮನ್ನೆ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" ಎಂದು ಅಪೊಸ್ತಲರ ಕೃತ್ಯಗಳು 20:28 ಹೇಳುತ್ತದೆ. ಆತನು ಅವರಿಗೆ ಯಾವ ಕೆಲಸ ಕೊಡುತ್ತಾನೆ, ಮತ್ತು ಅವರು ಆ ಕೆಲಸವನ್ನು ಮಾಡಲು ಆತನು ಅವರನ್ನು ಹೇಗೆ ನಿರೀಕ್ಷಿಸುತ್ತಾನೆ?

## ಸಭಾ ಹಿರಿಯರು ಏನು ಮಾಡುತ್ತಾರೆ?

ಈ ಆಧುನಿಕ ಯುಗದಲ್ಲಿ ದೊಡ್ಡ ಕಂಪನಿಯಲ್ಲಿಯ ಬೋರ್ಡ್ ಆಫ್ ಡೈರೆಕ್ಟರರ ರೀತಿಯಲ್ಲಿ ಸಭಾಹಿರಿಯರು ಸಭೆಯಲ್ಲಿ ಕಾರ್ಯ ಮಾಡುತ್ತಾರೆಂದು ನಾವು ಯೋಚಿಸುತ್ತೇವೆ. ಇದನ್ನು ಕರ್ತನು ಉದ್ದೇಶಿಸಿದ್ದನೋ?

### ಹೊಸ ಒಡಂಬಡಿಕೆಯಲ್ಲಿ ಹಿರಿಯರಿಗೆ ಯಾವ ಕರ್ತವ್ಯಗಳು ಕೊಡಲ್ಪಟ್ಟಿವೆ?

*ಮೊದಲನೆಯದು, ಸಭಾಹಿರಿಯರು ನಂಬಿಗಸ್ತರಾಗಿ ಉಳಿಯಬೇಕು.* "ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" ಎಂದು ಪೌಲನು ಎಫೆಸದ ಹಿರಿಯರಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 20:28; NRSV). ಅವರ ಮೊದಲನೆಯ ಜವಾಬ್ದಾರಿಕೆಯು ಪಾಪದಿಂದ ಹೊರಗೆ ಇದ್ದು, ನಂಬಿಕೆಯಲ್ಲಿ ಇರುವಂಥದ್ದಾಗಿತ್ತು. 1 ಪೇತ್ರ 5:3ರ ಪ್ರಕಾರ, ಹಿರಿಯರು ಮಾದರಿಯಿಂದ ಪ್ರಾಥಮಿಕವಾಗಿ ನಡಿಸಬೇಕೆಂಬುದನ್ನು ಅವರು ಅರ್ಥಮಾಡಿಕೊಳ್ಳುವಾಗ ಇದು ವಿಶೇಷವಾಗಿ ಮಹತ್ವದ್ದಾಗುತ್ತದೆ.

ಇಬ್ರಿಯ 13ರಲ್ಲಿ ಎರಡು ವಚನಗಳನ್ನು ಗಮನಿಸಿರಿ. "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ" ಎಂದು ಇಬ್ರಿಯ 13:17 ಹೇಳುತ್ತದೆ. "ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ; ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರೆಂಬುದನ್ನು ಆಲೋಚಿಸಿರಿ; ಅವರ ನಂಬಿಕೆಯನ್ನು ಅನುಸರಿಸಿರಿ" ಎಂದು ವಚನ 7 ಹೇಳುತ್ತದೆ. ಎರಡು ವಚನಗಳ ಮಧ್ಯದಲ್ಲಿಯ ಭಿನ್ನತೆಯು ವಚನ 7ರ ನಾಯಕರು ಆಗಲೇ ಸತ್ತು ಹೋಗಿದ್ದರು ಮತ್ತು ವಚನ 17ರಲ್ಲಿಯ ನಾಯಕರು ಇನ್ನೂ ಇದ್ದರು ಎಂಬುದಾಗಿದೆ. ಹಾಗಿದ್ದರೆ, ಈ ಹೇಳಿಕೆಯು, ಭಾಗಶಃವಾಗಿಯಾದರೂ, "ಇತರರು ತನ್ನನ್ನು ಜ್ಞಾಪಿಸಿಕೊಳ್ಳುವಂತೆ ... ತನ್ನ ನಂಬಿಕೆಯನ್ನು ಅನುಕರಿಸುವಂತೆ" ಸಭಾ ಹಿರಿಯನು ನಾಯಕನಂತೆ ತನ್ನ ಒಳ್ಳೆ ಉದಾಹರಣೆಯ ಆದರ್ಶವನ್ನು ಬಿಟ್ಟು ಹೋಗಬೇಕು.

*ಎರಡನೆಯದು, ಹಿರಿಯರಿಗೆ ನಡಿಸುವ ಜವಾಬ್ದಾರಿಕೆಯು ಕೊಡಲ್ಪಟ್ಟಿದೆ.* ಸಭಾ ಹಿರಿಯನಿಗಾಗಿ ಉಪಯೋಗಿಸಿದ ಎಲ್ಲಾ ಪದಗಳು "ಹಿರಿಯ," "ಬಿಷಪ್," "ಪಾಸ್ಟರ್," ಮತ್ತು "ಕುರುಬ" ಇವು ನಾಯಕತ್ವವನ್ನು ಸೂಚಿಸುತ್ತವೆ. ಹಳೇ ಒಡಂಬಡಿಕೆಯ ಸಮಯದಲ್ಲಿಯ ಅರಸರು ಕುರುಬರೆಂದು ಯೋಚಿಸಲ್ಪಡುತ್ತಿದ್ದರು. ಕರ್ತನು ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿ ಕುರುಬನೆಂದು ಮಾತಾಡಲ್ಪಟ್ಟಿದ್ದಾನೆ. ಹಿರಿಯರು ಹಳೇ ಒಡಂಬಡಿಕೆಯಲ್ಲಿ ನಾಯಕರಂತೆ ಗುರುತಿಸಲ್ಪಟ್ಟಿದ್ದರು, ಮತ್ತು ಹೊಸ ಒಡಂಬಡಿಕೆಯಲ್ಲಿ ಹಿರಿಯರು ಗ್ರೀಕ್ ಮತ್ತು ಯೆಹೂದಿ ಸಮಾಜಗಳಲ್ಲಿ ನಾಯಕರಾಗಿದ್ದರು.

ಸಭಾ ಹಿರಿಯರು ಸಭೆಯನ್ನು "ಆಳಿದರು" ಎಂದು ಕೆಲವು ವಾಕ್ಯಭಾಗಗಳು ಬೋಧಿಸುತ್ತವೆ. "ಚೆನ್ನಾಗಿ ಅಧಿಕಾರ ನಡಿಸುವ ಸಭೆಯ ಹಿರಿಯರನ್ನು, ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು" ಎಂದು 1 ತಿಮೊಥೆ 5:17 ಹೇಳುತ್ತದೆ. KJV ಇಬ್ರಿಯ 13:7, "ನಿಮ್ಮ ಮೇಲೆ ಅಧಿಕಾರ ನಡಿಸುವವರ" (NRSV: "ನಿಮ್ಮ ನಾಯಕರು") ಬಗ್ಗೆ ಮಾತಾಡುತ್ತದೆ. ಸಭೆಯ ಸದಸ್ಯರು ನಾಯಕರಿಗೆ (ಬಹುಶಃ ಹಿರಿಯರಿಗೆ) ಅಧೀನರಾಗಿರಬೇಕು: "ನೀವು ಸಭಾ ನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ" (ಇಬ್ರಿಯ 13:17; ಹೋಲಿಸು 1 ಪೇತ್ರ 5:5).

ಈ ವಾಕ್ಯಭಾಗಗಳ ಮಹತ್ವವೇನು? ಮೂಲವಾಗಿ, ಈ ಪರಿಶುದ್ಧ ಬರಹಗಳು ಸಭಾ ಹಿರಿಯರಿಗೆ ಸಭೆಯನ್ನು ನಡಿಸುವ ಜವಾಬ್ದಾರಿಕೆಯು ಕೊಡಲ್ಪಟ್ಟಿದೆ ಎಂಬರ್ಥ ಕೊಡುತ್ತವೆ. ಹಿರಿಯರು ಕಡಿಮೆ ಅರ್ಹತೆಯುಳ್ಳ ಮತ್ತು ನಡಿಸಲು ಕಡಿಮೆ ಆತ್ಮಿಕತೆಯುಳ್ಳ ಇತರರಿಗೆ ನಾಯಕತ್ವದ ಪಾತ್ರವನ್ನು ಬಿಟ್ಟು ಕೊಡಬಾರದು; ಇಲ್ಲವೇ ಸಭೆಯು ನಾಯಕರಿಲ್ಲದ್ದಾಗುವಂತೆ ಬಿಟ್ಟು ಬಿಡಬಾರದು.

ಹಿರಿಯರು ನಡಿಸಬೇಕು ಎಂಬುದು ಅವರು ಅಧಿಕಾರ ನಡಿಸುವವರಂತೆ, ಸೈನ್ಯದ ನಾಯಕನು ನಡಿಸುವಂತೆ, ಇಲ್ಲವೇ ನಿರ್ದೇಶಕರ ಮಂಡಳಿಯು ಆಳುವಂತೆ ಆಳಬೇಕೆಂದು ಅರ್ಥವಾಗುವದಿಲ್ಲ. ಸರ್ವಾಧಿಕಾರ ನಾಯಕತ್ವವನ್ನು - "ಬಿಷಪ್," ಇಲ್ಲವೇ "ಅಧ್ಯಕ್ಷ" (*episkopos*) ಎಂಬ ವಿಚಾರವನ್ನು ಗ್ರೀಕ್ ಪದವು ಅನ್ವಯಿಸುತ್ತದೆ ಎಂದು ಯೋಚಿಸಿದರೂ - ಅದಕ್ಕೆ ಅಂಥ ಅರ್ಥವಿರುವ ಅವಶ್ಯಕತೆಯಿಲ್ಲ. ಪದದ ಕ್ರಿಯಾಪದ ರೂಪವು "ಜೋಪಾಸನೆ ಮಾಡು" ಎಂದರ್ಥ ಕೊಡುತ್ತದೆ.

*ಮೂರನೆಯದು, ಹಿರಿಯರು ಮಂದೆಯನ್ನು ಸುಳ್ಳು ಬೋಧಕರಿಂದ ಕಾಪಾಡಬೇಕು.* ಎಫೆಸದ ಹಿರಿಯರಿಗೆ ತಮ್ಮ ಬಗ್ಗೆ ಮತ್ತು ಮಂದೆಯ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದನಂತರ, ಪೌಲನು ಅವರಿಗೆ ಎಚ್ಚರಿಕೆ ಕೊಟ್ಟನು, "ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು" (ಅಪೊಸ್ತಲರ ಕೃತ್ಯಗಳು 20:29, 30). ಅಂಥ ತೋಳಗಳಿಂದ ಹಿಂಡನ್ನು ರಕ್ಷಿಸುವುದು ಹಿರಿಯರ ಜವಾಬ್ದಾರಿಕೆಯಾಗಿದೆ ಎಂಬುದು ಸ್ಪಷ್ಟವಾಗಿದೆ. ತೀತ 1:9-11ರಲ್ಲಿ, ಪೌಲನು, ಹಿರಿಯನು "ಸ್ವಸ್ಥ ಬೋಧನೆಯಿಂದ ಜನರನ್ನು ಎಚ್ಚರಿಸುವದಕ್ಕೂ ಎದುರಿಸುವವರ ಬಾಯಿಕಟ್ಟುವದಕ್ಕೂ ಶಕ್ತನಾಗಿರಬೇಕು," ಯಾಕೆಂದರೆ "ಅನೇಕರು ಬರೀ ಮಾತಿನವರಾಗಿಯೂ ಮೋಸಗಾರರಾಗಿಯೂ ಇದ್ದು ಅಧಿಕಾರಕ್ಕೆ ಒಳಗಾಗದವರಾಗಿದ್ದಾರೆ; ಅವರೊಳಗೆ ಹೆಚ್ಚು ಜನರು ಸುನ್ನತಿಯವರು," "ಅವರ ಬಾಯಿ ಮುಚ್ಚಿಸಲ್ಪಡಬೇಕು" ಎಂದು ಹೇಳಿದನು. ಸಭೆಯನ್ನು ಸುಳ್ಳು ಬೋಧಕರಿಂದ ಕಾಪಾಡುವುದು ಹಿರಿಯರಿಗಿರುವ ಅತೀ ಮಹತ್ವದ ಪಾತ್ರವಾಗಿರುತ್ತದೆ.

ಹೆಚ್ಚಾದ ಉದಾಹರಣೆಗಳಲ್ಲಿ ಹಿರಿಯರು ಆದರ್ಶದಿಂದ, ಮನವೊಲಿಸುವಿಕೆಯಿಂದ, ಹಾಗೂ ಪ್ರೇರೇಪಣೆಯಿಂದ ನಡಿಸಲ್ಪಟ್ಟಿದ್ದಾರೆ. ಹೀಗಿದ್ದರೂ, ಸುಳ್ಳು ಬೋಧಕರನ್ನು

ಕುರಿತು ಹಿರಿಯರಿಗೆ ಸಂಪೂರ್ಣವಾದ ಜವಬ್ದಾರಿಕೆಯಿತ್ತು. ಕುರಿಗಳು ನಿತ್ಯವಾಗಿ ತಪ್ಪಿ ಹೋಗುವ ಪರಿಣಾಮವಾಗುವಂತೆ, ಸುಳ್ಳು ಬೋಧಕರು ಮಂದೆಯನ್ನು ಅಡ್ಡದಾರಿಗೆಳೆಯ ಬಹುದಾದರೆ, ಹಿರಿಯರು ಸತ್ಯಕ್ಕಾಗಿ ನಿಲ್ಲತಕ್ಕದ್ದು ಹಾಗೂ ಆ ಬೋಧಕರಿಂದ ಮಂದೆಯನ್ನು ಕಾಪಾಡಲು ಸಾಧ್ಯವಾದ ಪ್ರತಿಯೊಂದು ಕಾನೂನಿನ, ನೈತಿಕ ಮತ್ತು ನೀತಿಯ ಕ್ರಮಗಳನ್ನು ಕೈಕೊಳ್ಳತಕ್ಕದ್ದು.

*ನಾಲ್ಕನೆಯದು, ಹಿರಿಯರು ಮಂದೆಗೆ ಕುರುಬರಂತೆ ವರ್ತಿಸ ತಕ್ಕದ್ದು.* ಎಫೆಸ 4:11ರಲ್ಲಿ ಅವರು "ಪಾಸ್ಟರರಂತೆ" ಇಲ್ಲವೇ "ಕುರುಬರಂತೆ" ಹೇಳಲ್ಪಟ್ಟಿದ್ದಾರೆ. ಅಪೊಸ್ತಲರ ಕೃತ್ಯಗಳು 20:28ರಲ್ಲಿ (NRSV) "ದೇವರ ಸಭೆಯನ್ನು ಪರಿಪಾಲಿಸಬೇಕು" ಎಂದು ಮತ್ತು 1 ಪೇತ್ರ 5:2ರಲ್ಲಿ "ದೇವರ ಮಂದೆಯನ್ನು ಕಾಯಿರಿ"ಎಂದು ಹೇಳಲ್ಪಟ್ಟಿದ್ದಾರೆ.

"ಪರಿಪಾಲಿಸುವುದು" ಏನನ್ನು ಒಳಗೊಂಡಿರುತ್ತದೆ? ಮಂದೆಯನ್ನು ಸುಳ್ಳು ಬೋಧಕ ರಿಂದ ಕಾಪಾಡುವದನ್ನು ಒಳಗೊಂಡಿರುತ್ತದೆ. ಅಲ್ಲದೇ ಮಂದೆಗೆ ಬೋಧಿಸುವದನ್ನು (ಆಹಾರ ಒದಗಿಸುವದನ್ನು) ಇಲ್ಲವೇ ಅವರು ಹೆಚ್ಚೆಚ್ಚಾಗಿ ಬೋಧಿಸಲ್ಪಡುವಂತೆ ನೋಡಿ ಕೊಳ್ಳುವದನ್ನು ಒಳಗೊಂಡಿರುತ್ತದೆ.

"ಮಂದೆಯನ್ನು ಪರಿಪಾಲಿಸುವುದು" ಅಂದರೇನೆಂಬುದನ್ನು ಅರ್ಥಮಾಡಿಕೊಳ್ಳಲಿಕ್ಕೆ ನಾವು ಪುರಾತನ ಕುರುಬರನ್ನು ಚಿತ್ರಿಸಿಕೊಳ್ಳುವ ಅಗತ್ಯತೆಯಿದೆ. ಇಂದು, ಕುರಿಗಳು ಮೋಟರ್ ಸೈಕಲಿನ ಮೇಲೆ ಕುಳಿತ ಜನರಿಂದ ಇಲ್ಲವೇ ನಾಯಿಗಳಿಂದ ಮೇಯಿಸಲಿಕ್ಕೆ ಬಿಡಲ್ಪಡುತ್ತವೆ. ಹೊಸ ಒಡಂಬಡಿಕೆಯ ಸಮಯದಲ್ಲಿ ಆ ಸ್ಥಳಗಳಲ್ಲಿ ಹೀಗೆ ಇರಲಿಲ್ಲ! ಒಳ್ಳೇ ಕುರುಬನ ಚಿತ್ರಕ್ಕಾಗಿ ಮತ್ತು ತನ್ನ ಕುರಿಗಳಿಗೆ ಅವನ ಸಂಬಂಧದ ಬಗ್ಗೆ ಲೂಕ 15:3-7ನ್ನು ಯೋಚಿಸಿರಿ: ಆ ಕುರುಬನು ತಪ್ಪಿ ಹೋದ ಕುರಿಯನ್ನು ಹುಡುಕಲು, ಗಣನೀಯವಾದ ಕ್ರಯ ಕೊಡಬೇಕಾದ ಸಂಶಯವಿಲ್ಲದಿದ್ದರೂ ಹೊರಗೆ ಹೋದನು. ಯೋಹಾನ 10:1-17 ಯೋಚಿಸಿರಿ: ಒಳ್ಳೇ ಕುರುಬನು ತನ್ನ ಕುರಿಗಳನ್ನು ಹೆಸರಿನಿಂದ ಕರೆಯುತ್ತಾನೆ ... ಅವನು ಅವುಗಳನ್ನು ನಡಿಸುತ್ತಾನೆ. ಅವುಗಳಿಗಾಗಿ ಅವನು ತನ್ನ ಪ್ರಾಣ ಕೊಡುತ್ತಾನೆ ... ಅವನು ಅವುಗಳನ್ನು ತಿಳಿದಿರುತ್ತಾನೆ. ಕೀರ್ತನೆ 23ನ್ನು ಯೋಚಿಸಿರಿ: ಕುರುಬನ ನಿಮಿತ್ತ ಕುರಿಯು "ನಾನು ಕೊರತೆ ಪಡೆನು" ಎಂದು ಹೇಳುತ್ತದೆ. ಕುರಿಗಳಿಗೆ ಕುರುಬನು ಒದಗಿಸುವದರಿಂದ ಕುರಿಗಳು ಕೊರತೆ ಪಡುವ ಅವಶ್ಯಕತೆಯಿರುವದಿಲ್ಲ.

ಯೆಹೆಜ್ಕೇಲ 34:2-6ರಲ್ಲಿ ವಿವರಿಸಿದ ಇಸ್ರಾಯೇಲಿನ ದುಷ್ಟ ಕುರುಬರೊಂದಿಗೆ (ಅರಸರಂಥ, ರಾಜ ಕುಮಾರರಂಥ ಮತ್ತು ಸುಳ್ಳು ಪ್ರವಾದಿಗಳಂಥ ನಾಯಕರೊಂದಿಗೆ) ವ್ಯತ್ಯಾಸವನ್ನು ನೋಡಿರಿ:

> "... ಇಸ್ರಾಯೇಲೆಂಬ ಮಂದೆಯ ಕುರುಬರಿಗೆ ಈ ದೈವೋಕ್ತಿಯನ್ನು ನುಡಿ, ನುಡಿದೇ ನುಡಿ - ಕರ್ತನಾದ ಯೆಹೋವನು ಇಂತೆನ್ನುತ್ತಾನೆ - ಅಯ್ಯೋ, ಸ್ವಂತ ಹೊಟ್ಟೆಯನ್ನು ಹೊರೆದು ಕೊಳ್ಳುವ ಇಸ್ರಾಯೇಲಿನ ಕುರುಬರ ಗತಿಯನ್ನು ಏನು ಹೇಳಲಿ! ಕುರಿಗಳ ಹೊಟ್ಟೆಯನ್ನು ನೋಡುವದು ಕುರುಬನ ಧರ್ಮವಲ್ಲವೇ. ನೀವು ಕೊಬ್ಬಿನ ಮಾಂಸವನ್ನು ತಿನ್ನುತ್ತೀರಿ, ಉಣ್ಣೆಯ ಹೊದಿಕೆಯನ್ನು ಹೊದಿಯುತ್ತೀರಿ, ಕೊಬ್ಬಿದ ಕುರಿಗಳನ್ನು ಕಡಿಯುತ್ತೀರಿ; ಆದರೆ ಕುರಿಗಳನ್ನು ಮೇಯಿಸುವದಿಲ್ಲ. ಹಾ, ನೀವು ದುರ್ಬಲವಾದವುಗಳನ್ನು ಬಲಗೊಳಿಸಲಿಲ್ಲ, ರೋಗದವುಗಳನ್ನು ಸ್ವಸ್ಥ ಮಾಡಲಿಲ್ಲ, ಮುರಿದ ಅಂಗಗಳನ್ನು ಕಟ್ಟಲಿಲ್ಲ, ಓಡಿಸಿದವುಗಳನ್ನು ಮಂದೆಗೆ ಸೇರಿಸಲಿಲ್ಲ, ತಪ್ಪಿಸಿ ಕೊಂಡವುಗಳನ್ನು ಹುಡುಕಲಿಲ್ಲ; ಅವುಗಳನ್ನು ಹಿಂಸೆ ಬಲತ್ಕಾರಗಳಿಂದ ಆಳುತ್ತಾ ಬಂದಿದ್ದೀರಿ. ಕುರುಬರು ಇರಲಿಲ್ಲವಾದದರಿಂದ ಅವು ಚದರಿ ಹೋದವು; ದಿಕ್ಕಾಪಾಲಾಗಿ ಕಾಡಿನ ಸಕಲ ಮೃಗಗಳಿಗೆ ತುತ್ತಾದವು; ನನ್ನ ಕುರಿಗಳು ಮಲೆನಾಡಿನಲೆಲ್ಲಾ ಎತ್ತರ ವಾದ ಪ್ರತಿಯೊಂದು ಬೆಟ್ಟದ ಮೇಲೆ ಅಲೆದಾಡಿದವು; ಹೌದು, ನನ್ನ ಕುರಿಗಳು ಭೂ

ಮಂಡಲದಲೆಲ್ಲಾ ಚದರಿಹೋದವು; ಯಾರೂ ಅವುಗಳ ಹಿಂದೆ ಹೋಗಿ ಹುಡುಕಲಿಲ್ಲ."

*ಐದನೆಯದು, ಸಭಾಹಿರಿಯರು ಮಂದೆಯ ಆತ್ಮಗಳನ್ನು ಕಾಣುವವರಾಗಿರಬೇಕು.* "ನಿಮ್ಮ ಸಭಾ ನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸ ಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ" ಎಂದು ಇಬ್ರಿಯ 13:17 ಹೇಳುತ್ತದೆ. "ಹಿರಿಯರಿಗಾಗಿ" ಇಲ್ಲಿ ಯಾವುದೇ ಸಾಮಾನ್ಯವಾದ ಗ್ರೀಕ್ ಪದಗಳು ಉಪಯೋಗಿಸಲ್ಪಟ್ಟಿರುವದಿಲ್ಲ; ಆದರೆ ಸ್ಥಳಿಕ ಸಭೆಯ ನಾಯಕನಂತೆ ಯಾರೊಬ್ಬನೂ ಪ್ರತ್ಯೇಕಿಸಲ್ಪಡದೇ, ಇರುವ ದೃಷ್ಟಿಕೋನದಿಂದ "ಹಿರಿಯರು," "ನಾಯಕರು" ಎಂಬ ಪದದಿಂದ ಸೂಚಿಸಲ್ಪಟ್ಟಿದ್ದಾರೆಂಬುದು ಸ್ಪಷ್ಟವಾಗಿ ರುವಂತೆ ಕಾಣುತ್ತದೆ. ಈ ವಾಕ್ಯಭಾಗದಲ್ಲಿ "ನಾಯಕರ" ಇಲ್ಲವೇ "ಹಿರಿಯರ" ಕೆಲಸವು ಆತ್ಮಗಳನ್ನು ಕಾಯುವುದಾಗಿದೆ, ಒಂದು ಜವಾಬ್ದಾರಿಕೆಯಾಗಿದ್ದು ಅವರು ಒಂದು ದಿನ ಅದಕ್ಕಾಗಿ ಲೆಕ್ಕಾ ಒಪ್ಪಿಸಬೇಕು.

ಈ ಆಜ್ಞೆಯು ಬಹು ದೊಡ್ಡ ಜವಾಬ್ದಾರಿಕೆಯನ್ನು ಅನ್ವಯಿಸುತ್ತದೆ. ಸಭಾ ಹಿರಿಯನು ಹಿಂದಿನ ಸದಸ್ಯನ ಪೆಟ್ಟಿಗೆಯನ್ನು ದಾಟಿ ಹೋಗುವಾಗ, "ಈ ಸಹೋದರನು (ಇಲ್ಲವೇ ಸಹೋದರಿಯು) ಪರಲೋಕಕ್ಕೆ ಹೋಗುವಂತೆ ನಿಶ್ಚಿತ ಪಡಿಸಲು ನಾನು ಪ್ರತಿಯೊಂದನ್ನು ಮಾಡಿದೆನೋ?" ಎಂದು ತನ್ನಷ್ಟಕ್ಕೆ ತಾನು ಕೇಳಿಕೊಳ್ಳಬೇಕು ಎಂದು ಒಬ್ಬ ಪ್ರಸಂಗಿಯು ಹೇಳಿದನು. ಈ ಅಪ್ಪಣೆಯು ವಿಶೇಷವಾದ ಜವಾಬ್ದಾರಿಕೆಯ ಕ್ಷೇತ್ರವನ್ನು ಅನ್ವಯಿಸುತ್ತದೆ. ಇತರರನ್ನು ಕ್ರಿಸ್ತನ ಬಳಿಗೆ ತರುವದರಲ್ಲಿ ಹಿರಿಯರು ಒಳಗೊಂಡಿರಬೇಕಾಗಿದ್ದರೂ, ಅವರ ಪ್ರಾಥಮಿಕ ಜವಾಬ್ದಾರಿಕೆಯು ಈಗಾಗಲೇ ಅನ್ಯೋನ್ಯತೆಯಲ್ಲಿ ಇರುವವರ ಕಡೆಗಿರುತ್ತದೆ. ಅದು ಅವರು ಎಲ್ಲಿ ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕೆಂಬುದನ್ನು ತೋರಿಸುತ್ತದೆ.

*ಆರನೆಯದು, ಸಭಾ ಹಿರಿಯರು, ಸುವಾರ್ತಿಕರೊಂದಿಗೆ ಮತ್ತು ಬೋಧಕರೊಂದಿಗೆ, ಸಭೆಯು ಕಟ್ಟಲ್ಪಡಲಿಕ್ಕಾಗುವಂತೆ ಸೇವೆ ಮಾಡಲು ಪ್ರತಿಯೊಬ್ಬ ಸದಸ್ಯನನ್ನು ಶಕ್ತನನ್ನಾಗಿ ಮಾಡಬೇಕು.* ಇದು ಎಫೆಸ 4:11, 12ರ ಸಂದೇಶವಾಗಿದೆ: "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿ ಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು" ಆದುದರಿಂದ, ಒಬ್ಬ ಸಭಾ ಹಿರಿಯನ ಅಳತೆಯು (ಇಲ್ಲವೇ ಒಬ್ಬ ಸುವಾರ್ತಿ ಕನ ಇಲ್ಲವೇ ಒಬ್ಬ ಬೋಧಕನ) ಸೇವೆ ಮಾಡಲು ಅವನು ಎಷ್ಟು ಮಾಡುತ್ತಾನೆ ಎಂಬುದಲ್ಲ, ಆದರೆ ಅವನು ಸೇವೆ ಮಾಡಲು ನಡಿಸುವದರ ಮೇಲೆ, ಮತ್ತು ವಿಶೇಷವಾಗಿ, ಸೇವೆ ಮಾಡಲು ಅವರನ್ನು ಸನ್ನದ್ಧರನ್ನಾಗಿ ಮಾಡಿದ್ದರ ಮೇಲೆ ಅವಲಂಭಿಸಿರುತ್ತದೆ.

**ಸಭಾಹಿರಿಯರ ನಾಯಕತ್ವಕ್ಕೆ ಸಭೆಯು ಹೇಗೆ ಪ್ರತಿಕ್ರಿಯೆ ತೋರಿಸಬೇಕು?**

*ಸಭೆಯ ಸದಸ್ಯರು ಸ್ವಸ್ಥವಾದ ನಾಯಕತ್ವವನ್ನು ಅನುಸರಿಸಲು ಇಷ್ಟವುಳ್ಳವರಾಗಿರ ಬೇಕು.* ಹಿರಿಯರಿಗೆ ಬೋಧನೆ ಮಾಡಿದ ನಂತರ, ಪೇತ್ರನು, "ಯೌವನಸ್ಥರೇ ಅದೇ ರೀತಿ ಯಾಗಿ ಹಿರಿಯರಿಗೆ ಅಧೀನರಾಗಿರಿ" (1 ಪೇತ್ರ 5:5) ಎಂದು ಬರೆದನು. ಸಭಾಹಿರಿಯರನ್ನು ಅವನು ಸಭೆಯಲ್ಲಿಯ "ಅಧಿಕಾರಿಗಳಂತೆ" ಸಂಬೋಧಿಸುತ್ತಿರುವಾಗ, ಅವನು ಯೌವನಸ್ಥರಿಗೆ ಮಾತನಾಡಿದಾಗ, ಬಹುಶಃ ಸಭೆಯ ಪ್ರತಿಯೊಬ್ಬರನ್ನೂ ಅವನು ಸಂಬೋಧಿಸಿದನು. "ನಿಮ್ಮ ಸಭಾ ನಾಯಕರ ಮಾತನ್ನು ಕೇಳಿರಿ; ಅವರಿಗೆ ಅಧೀನರಾಗಿರಿ" ಎಂದು ಇಬ್ರಿಯ 13:17ರಲ್ಲಿ ಕ್ರೈಸ್ತರಿಗೆ ಹೇಳಲ್ಪಟ್ಟಿದೆ.

ಸದಸ್ಯರು ಹಿರಿಯರನ್ನು ಸಂತೋಷದಿಂದ ಯಾಕೆ ಅನುಸರಿಸಬೇಕೋ?

ಮೊದಲನೆಯದು, ಈ ಜನರು ವಿಶೇಷವಾಗಿ ಆ ಪಾತ್ರಕ್ಕಾಗಿ ಅರ್ಹರಾಗಿದ್ದಾರೆ (1 ತಿಮೊಥೆ 3; ತೀತ 1). ಆ ಅರ್ಹತೆಗಳನ್ನು ಹೊಂದಿದವರು ಹಿಂಬಾಲಿಸಲ್ಪಡಲು ಅರ್ಹರಾಗಿದ್ದಾರೆ, ಎರಡನೆಯದು, ಹಿರಿಯರನ್ನು "ಹುದ್ದೆಯಲ್ಲಿ" ಇಡಲು ಸಭೆಗೆ ಒಂದು ಹೇಳಿಕೆ ಇರುತ್ತದೆ. ಸಭಾಹಿರಿಯರು ನೇಮಿಸಲ್ಪಡುವಾಗ, ಸಭೆಯು ಸಾಮಾನ್ಯವಾಗಿ ಅವರನ್ನು ಸ್ವೀಕರಿಸುವದರಲ್ಲಿ ಒಪ್ಪಿಗೆ ಕೊಡಬೇಕಾಗುತ್ತದೆ (ಕೆಲವು ಜನರು ಅರ್ಹರಾಗಿರುವದಿಲ್ಲ ಎಂದು ಹೇಳುವ ಹಕ್ಕು ಇರುತ್ತದೆ). ಮೂರನೆಯದು, ಪರಿಶುದ್ಧಾತ್ಮನು ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾನೆ (ಅಪೊಸ್ತಲರ ಕೃತ್ಯಗಳು 20:28). ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟ ವಾಕ್ಯದಲ್ಲಿ ಕೊಡಲ್ಪಟ್ಟಿದ್ದರ ಪ್ರಕಾರ ಜನರು ಹಿರಿಯರಾಗಿ ಆಯ್ಕೆ ಮಾಡಿಕೊಳ್ಳಲ್ಪಟ್ಟಾಗ, ಅವರು ಕೆಲಸ ಮಾಡಲು ದೈವಿಕವಾಗಿ ನೇಮಕ ಮಾಡಲ್ಪಡುತ್ತಾರೆ.

*ಸಭೆಯ ನಾಯಕರನ್ನು ಗೌರವಿಸಬೇಕು.* "ಚೆನ್ನಾಗಿ ಅಧಿಕಾರ ನಡಿಸುವ ಸಭೆಯ ಹಿರಿಯರನ್ನು, ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು" (1 ತಿಮೊಥೆ 5:17) ಎಂದು ಪೌಲನು ಬರೆದನು. "ಇಮ್ಮಡಿಯಾದ ಗೌರವವು" ತಮ್ಮ ಕಾರ್ಯಕ್ಕಾಗಿ ಅವರು ಸಂಬಳ ಪಡೆಯುವದನ್ನು ಒಳಗೊಂಡಿರುವದೆಂದು ಹಿನ್ನೆಲೆಯು ಸ್ಪಷ್ಟಪಡಿಸುತ್ತದೆ. ಸಂಬಳವು "ಎರಡನೆಯ ಗೌರವವು" ಆಗಿದ್ದರೆ, ಮೊದಲನೆಯದು ಉಚಿತವಾಗಿ ಕೊಡಲ್ಪಡುವ ಮರ್ಯಾದೆಯಾಗಿರುತ್ತದೆ, ಇದಕ್ಕೆ ಕಾರಣ ಜನರ ಮತ್ತು ಅವರ ಕಾರ್ಯದ ಮಹತ್ವದ ಗುಣವಾಗಿರುತ್ತದೆ.

*ಕ್ರೈಸ್ತರು ಕನಿಷ್ಠ ರೀತಿಯ ಹಿಂಬಾಲಕರಾಗಿರುವದನ್ನು ತಪ್ಪಿಸಿ ಕೊಳ್ಳಬೇಕು.* ನಾವು ಸಾಮಾನ್ಯವಾಗಿ ಸಭೆಯ ಕೇಡುಗಳಿಗಾಗಿ ಕೆಟ್ಟ ನಾಯಕತ್ವವನ್ನು ದೂರುತ್ತೇವೆ. ಕೆಲವು ಉದಾಹರಣೆಗಳಲ್ಲಿ ಕಡಿಮೆ ತರಗತಿಯ ನಾಯಕತ್ವವೆಂದು ನಾವು ಗುರುತಿಸುವಂಥದ್ದು ನಿಜವಾಗಿಯೂ ಕನಿಷ್ಠ ರೀತಿಯ "ಹಿಂಬಾಲಿಸುವಿಕೆಯಾಗಿರುತ್ತದೆ": ಸಭಾ ಹಿರಿಯರು ತಮ್ಮ ಪಾತ್ರವನ್ನು ನೆರವೇರಿಸುತ್ತಿರುವರು, ಆದರೆ ಸದಸ್ಯರು ಕಾರಣವಿಲ್ಲವೇ ಅನುಸರಿಸುವದನ್ನು ನಿರಾಕರಿಸುವರು!

## ಸಭಾ ಹಿರಿಯರು ಹೇಗೆ ನಡಿಸಬೇಕು?

ಹಿರಿಯರು ಸಭೆಯನ್ನು ನಡಿಸಬೇಕು ಮತ್ತು ಸಭೆಯು ತಮ್ಮ ನಾಯಕತ್ವವನ್ನು ಹಿಂಬಾಲಿಸಬೇಕು ಎಂದು ಹೇಳುವುದು ಸಭೆಯನ್ನು ಇಂದು ತೊಂದರೆ ಪಡಿಸುವದನ್ನು ಪರಿಹರಿಸಲಿಕ್ಕಾಗುವದಿಲ್ಲ. ಸಭಾ ಹಿರಿಯರು *ಹೇಗೆ* ನಡಿಸಬೇಕು?

ಅರಸರಂತೆ ಇಲ್ಲವೇ ಸರ್ವಾಧಿಕಾರಿಗಳಂತೆ ಅವರು ನಡಿಸಬೇಕೋ? ದಂಡನಾಯಕರಂತೆ ಸೇನಾಪತಿಗಳಂತೆ ಅವರು ನಡಿಸಬೇಕೋ? ತರಬೇತಿದಾರರು ಇಲ್ಲವೇ ಶಿಕ್ಷಕರು ನಡಿಸುವಂಥ ರೀತಿಯಲ್ಲಿ ನಡಿಸಬೇಕೋ? ತಂದೆ ತಾಯಿಗಳಂತೆ ನಡಿಸಬೇಕೋ? ಅವರ ನಾಯಕತ್ವವನ್ನು ಹೋಲಿಸಲು ಬೇರೆ ರೀತಿಯ ನಾಯಕತ್ವವು ಇರುವದಿಲ್ಲವೋ?

ಹಿರಿಯರು ನಾಯಕತ್ವದ ತಮ್ಮ ವಿಚಾರವನ್ನು ಬೈಬಲಿನಿಂದ ಮಾತ್ರವೇ ಹೊಂದಿಕೊಳ್ಳುವುದಾದರೆ, ಬಹುಶಃ ನಾಯಕತ್ವದ "ಹೇಗೆ" ಎಂಬುದನ್ನು ಕುರಿತು ವಿವಾದವು ಇರಲಾರದು. ಹಿರಿಯರಾಗಿ ನೇಮಿಸಲ್ಪಟ್ಟ ಜನರು ಆ ಕೆಲಸದಲ್ಲಿ ತಮ್ಮ ಸ್ವಂತ ಅನುಭವಗಳಿಂದ ಪ್ರಭಾವಿತವಾದ ನಾಯಕತ್ವದ ದೃಷ್ಟಿಕೋನದಿಂದ ಪ್ರವೇಶಿಸುವುದು ಸಮಸ್ಯೆಯಾಗಿರುತ್ತದೆ. ಅವರು ನಾಯಕರು ಇಲ್ಲವೇ ವ್ಯವಹಾರದಲ್ಲಿ, ಸೈನ್ಯದಲ್ಲಿ, ಪಂದ್ಯಾಟಗಳಲ್ಲಿ ಇಲ್ಲವೇ ತಮ್ಮ ಕುಟುಂಬದಲ್ಲಿ ಅನುಯಾಯಿಗಳಾಗಿರುತ್ತಾರೆ. ಈ ಅನುಭವಗಳಲ್ಲಿ ಒಂದು ಇಲ್ಲವೇ ಹೆಚ್ಚಾದವುಗಳಲ್ಲಿ ಯೋಗ್ಯವಾಗಿ ಕಂಡು ಬಂದ ನಾಯಕತ್ವದ ವಿಧಾನಗಳನ್ನು ಸಭೆಯಲ್ಲಿ ಉಪಯೋಗಿಸಬೇಕೆಂದು ಅವರು ಯೋಚಿಸುತ್ತಾರೆ.

ಪಾಶ್ಚಿಮಾತ್ಯ ಜಗತ್ತಿನಲ್ಲಿ ನಾಯಕತ್ವದ ವಿಧಾನಗಳಿಗಾಗಿ "ವ್ಯಾವಹಾರದ ಮಾದರಿಯನ್ನು" ಸಭೆಯಲ್ಲಿ ಉಪಯೋಗಿಸುವುದು ಅದರ ಗುಣಲಕ್ಷಣವಾಗಿದೆ. ಸಭಾ ಹಿರಿಯರು "ಬೋರ್ಡ್ ಆಫ್ ಡೈರೆಕ್ಟರರದಂತೆ" ಕೂಡಿ ಬರುತ್ತಾರೆ, "ಚೀಫ್ ಎಕ್ಜೆಕ್ಯೂಟಿವ್ ಆಫೀಸರ್" ಆಗಿ ಒಬ್ಬ ಪ್ರಸಂಗಿಯನ್ನು ನೇಮಿಸಿಕೊಳ್ಳುತ್ತಾರೆ ಮತ್ತು "ಕೆಳದರ್ಜೆ"ಯವರ ಬಗ್ಗೆ ಚಿಂತಿಸುವವರಾಗುತ್ತಾರೆ. ಅವರು ಸಂಖ್ಯೆ, ಹಣ ಮತ್ತು ಕಟ್ಟಡಗಳ ಬಗ್ಗೆ ಕಾರ್ಯ ಮಾಡಬೇಕು. "ಕಂಪನಿ"ಗಾಗಿ ತೀರ್ಮಾನಗಳನ್ನು ಮಾಡುವುದು ತಮ್ಮ ಪ್ರಾಥಮಿಕ ಪಾತ್ರವೆಂದು ತಿಳಿದು ಕೊಳ್ಳುತ್ತಾರೆ. ತಮ್ಮ ನಿಯಮಗಳನ್ನು ಮಾಡಿಕೊಂಡು ಅವುಗಳನ್ನು ಪ್ರಕಟಿಸುತ್ತಾರೆ, ಇದಲ್ಲದೇ ಅವರ "ಕೆಲಸದವರು" ಉದ್ಪಾದಿಸುವಲ್ಲಿ ಸೋತು ಹೋದರೆ ಅವರನ್ನು ಕೆಲಸದಿಂದ ತೆಗೆದು ಹಾಕುತ್ತಾರೆ.

ಇದು ಬೈಬಲಿಗನುಗುಣವಾಗಿದೆಯೋ? ನಾಯಕತ್ವದ "ಹೇಗೆ" ಎಂಬುದರ ಬಗ್ಗೆ ಹೇಳಲಿಕ್ಕೆ ಹೊಸ ಒಡಂಬಡಿಕೆ ಏನಾದರೂ ಇದೆಯೋ? ಆ ಪ್ರಶ್ನೆಗೆ ಉತ್ತರ ಕೊಡುವ ಒಂದು ವಾಕ್ಯಭಾಗವನ್ನು ನೋಡುವ ಮೊದಲು, ಒಂದು ಸುಳ್ಳು ವಿಚಾರಗಳ ಸರಣಿಯನ್ನು ಸ್ಪಷ್ಟಪಡಿಸುವ ಮತ್ತು ಈ ಪ್ರಶ್ನೆಯ ಮೇಲೆ ಈ ಸರಣಿಯಲ್ಲಿ ಈಗಾಗಲೇ ಹೇಳಿರುವದನ್ನು ಒತ್ತಿ ಹೇಳುವ ಅಗತ್ಯತೆಯಿರುತ್ತದೆ.

ತಪ್ಪಾಭಿಪ್ರಾಯಗಳನ್ನೂ ತಪ್ಪಾದ ತೀರ್ಮಾನಗಳನ್ನೂ ತಪ್ಪಿಸಿಕೊಳ್ಳೋಣ. ವಿಶ್ವದ ಸಭೆಯ ಬಗ್ಗೆ ನಮಗಿರುವ ಚಿತ್ರಗಳ ಆಧಾರದ ಮೇಲೆ ಹಿರಿಯರಾಗಿ ಕೆಲವರು ಸರ್ವಾಧಿಕಾರದಲ್ಲಿ ನಂಬಿಕೆಯಿಡುತ್ತಾರೆ. ಸಭೆಯು ಒಂದು ಕುಟುಂಬಕ್ಕೆ ಹೋಲಿಸಲ್ಪಡುವಾಗ, ಹಿರಿಯರಿಗೆ ಕುಟುಂಬದಲ್ಲಿ ತಂದೆಗೆ ಕೊಡಲ್ಪಟ್ಟ ಸ್ಥಾನವನ್ನು ಸ್ಥಳಿಕಸಭೆಯಲ್ಲಿ ಕೊಡಲಾಗುತ್ತದೆ; ಆದುದರಿಂದ, ಅವರಿಗೆ ಸ್ಥಳಿಕ ಸಭೆಯ ಮೇಲೆ ತಮ್ಮ ಚಿತ್ತವನ್ನು ಒತ್ತಾಯವಾಗಿ ಹೇರುವ ಅಧಿಕಾರವಿರುತ್ತದೆ. ಇದಕ್ಕೆ ಬದಲಾಗಿ, ಸಭೆಯು ಒಂದು ರಾಜ್ಯವಾಗಿರುವದರಿಂದ, ಕ್ರಿಸ್ತನು ತನ್ನ ಚಿತ್ತವನ್ನು ಹೇರಲು ತನ್ನ ಅಧಿಕಾರದೊಂದಿಗೆ ಹಿರಿಯರನ್ನು ಸ್ಥಳಿಕ ಸಭೆಯ ಮೇಲೆ ಇಟ್ಟು, ಅವರನ್ನು ತನ್ನ ಪ್ರತಿನಿಧಿಗಳನ್ನಾಗಿ ಮಾಡುತ್ತಾನೆ ಎಂದು ಹೇಳಬಹುದು.

ಹೀಗೆ ವಿಚಾರಿಸುವದರೊಂದಿಗಿನ ಸಮಸ್ಯೆಯು ನಾವು ವಿಶ್ವವ್ಯಾಪ್ತಿ ಸಭೆಯ ಬಗ್ಗೆ ಬೋಧನೆಗಳನ್ನು ತೆಗೆದು ಕೊಳ್ಳಬಾರದು ಮತ್ತು ಬೋಧಿಸಲಿಕ್ಕೆ ಉದ್ದೇಶಿಸಿರದ ಸ್ಥಳಿಕ ಸಭೆಯನ್ನು ಕುರಿತು ಯಾವುದೇ ಅರ್ಥ ಮಾಡಬಾರದು ಎಂಬುದಾಗಿರುತ್ತದೆ. ಮೇಲೆ ಹೇಳಿದ ರೀತಿಯ ವಿಚಾರಿಸುವಿಕೆಯನ್ನು ಸ್ವೀಕರಿಸುವುದು ರೋಮನ್ ಕಥೋಲಿಕ್ ಸಭೆಯ ಪಕ್ಷವಹಿಸುವುದು ಮತ್ತು ಅದರ ಜಾಗತಿಕ ಸಭೆಯ ಸಂಘಟನೆಯ ದೃಷ್ಟಿಕೋನವನ್ನು ಸ್ವೀಕರಿಸುವುದು ಆಗಿರುತ್ತದೆ.

ಈ ಪಾಠದಲ್ಲಿ ಹೇಳಲ್ಪಟ್ಟಿದ್ದರಲ್ಲಿ ಬಹಳವಾದದ್ದು ನಾಯಕತ್ವದ "ಹೇಗೆ" ಎಂಬುದರ ಕುರಿತ ಅನ್ವಯಗಳನ್ನು ಒಳಗೊಂಡಿರುತ್ತದೆ. ಮೊದಲನೆಯದು, ನಾಯಕತ್ವವು ಒಂದು ವರ ಎಂಬ ಸಂಗತಿಯು ಹಿರಿಯರು ಇತರರಿಗಿಂತ ಮೇಲಕ್ಕೇರಿಸಲ್ಪಡಬಾರದು ಎಂಬುದನ್ನು ಸೂಚಿಸುತ್ತದೆ. ಎರಡನೆಯದು, ಸಭೆಯ ನಾಯಕರು "ಹಿರಿಯರು" ಎಂದು ಕರೆಯಲ್ಪಟ್ಟಿದ್ದು, ಅವರು ಬುದ್ಧಿವಂತಿಕೆಯಿಂದ, ಆದರ್ಶದಿಂದ ಮತ್ತು ಬೋಧಿಸುವದರಿಂದ ನಡಿಸಬೇಕೆಂಬುದನ್ನು ಸೂಚಿಸುತ್ತದೆ. ಮೂರನೆಯದು, ಹಿರಿಯರು ಬಿಷಪರೆಂದು ಇಲ್ಲವೇ ಅಧ್ಯಕ್ಷರೆಂದು ಕರೆಯಲ್ಪಟ್ಟಿದ್ದು, ಅವರು ಮೇಲ್ವಿಚಾರಣೆ ಮಾಡುವವರ ಕಡೆಗೆ ಉದಾರತೆಯಿಂದ ಇರಬೇಕು ಎಂಬುದನ್ನು ಸೂಚಿಸುತ್ತದೆ. ನಾಲ್ಕನೆಯದು, ಹಿರಿಯರು ಸಭಾಪಾಲಕರು ಇಲ್ಲವೇ ಕುರುಬರು ಎಂದು ಕರೆಯಲ್ಪಟ್ಟಿದ್ದು ಅವರು ಮಂದೆಯನ್ನು ನಡಿಸಬೇಕು, ಆದರೆ ಓಡಿಸಬಾರದು ಎಂಬುದನ್ನು ಸೂಚಿಸುತ್ತದೆ. ಅವರು ಕುರಿಗಳನ್ನು ತಿಳಿದಿರಬೇಕು. ಮತ್ತು ಕುರಿಗಳಿಂದ ತಿಳಿಯಲ್ಪಟ್ಟಿರ ಬೇಕು; ಅವರು ಕುರಿಗಳ ಸಮೀಪದಲ್ಲಿರಬೇಕು. ಮತ್ತು ಅವುಗಳ ಮಧ್ಯದಲ್ಲಿ ವಾಸಿಸಬೇಕು. ಅವರ ಕೆಲಸವು ಕುರಿಗಳ ಲಾಭಕ್ಕಾಗಿ ಇರಬೇಕು. ಮತ್ತು

ಕುರಿಗಾಗಿ (ತಮಗೋಸ್ಕರವಾಗಿ ಮಾತ್ರವಲ್ಲ) ಅತ್ಯುತ್ತಮವಾದದ್ದನ್ನು ಮಾಡ ಬೇಕು, ಹಾಗೂ ಕುರಿಗಳಿಗಾಗಿ ಸಾಯುವಷ್ಟರ ಮಟ್ಟಿಗೆ ಪ್ರೀತಿಸಬೇಕು. ಐದನೆಯದು, ಸಭೆಯ ಪ್ರಾಣಗಳಿಗಾಗಿ ಕಾಯುವ ಅವರ ಕಾರ್ಯವು, ಲೆಕ್ಕ ಕೊಡಬೇಕಾದವರಂತೆ ಇರುವುದು, ಅವರ ನಾಯಕತ್ವವು ಪ್ರಾಥಮಿಕವಾಗಿ ಕಟ್ಟಡಗಳ ಬಗ್ಗೆ ಕಾರ್ಯಕ್ರಮಗಳ ಬಗ್ಗೆ ಅಂಕಿ ಸಂಖ್ಯೆಗಳ ಬಗ್ಗೆ ಇರುವಂಥದ್ದಲ್ಲ, ಆದರೆ ವ್ಯಕ್ತಿ ವ್ಯಕ್ತಿಗಳ ಬಗ್ಗೆ ಇರುವುದೆಂಬುದನ್ನು ಸೂಚಿಸುತ್ತದೆ!

ಹಿರಿಯರಿಂದ ನಾಯಕತ್ವದ "ಹೇಗೆ" ಎಂಬುದು 1 ಪೇತ್ರ 5:1-6ರಲ್ಲಿ ಪ್ರಕಟಿಸಲ್ಪಟ್ಟಿದೆ:

> ಸಭೆಯ ಹಿರಿಯರೇ, ಜೊತೆ ಹಿರಿಯನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವದೇನೆಂದರೆಃ - ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ ದೇವರ ಚಿತ್ತದ ಪ್ರಕಾರ ಇಷ್ಟ ಪೂರ್ವಕವಾಗಿಯೂ ನೀಚವಾದ ದ್ರವ್ಯಾ ಶೆಯಿಂದಲ್ಲ ಸಿದ್ಧ ಮನಸ್ಸಿನಿಂದಲೂ, ಮೇಲ್ವಿಚಾರಣೆ ಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿಯೇ ನಡೆದು ಕೊಳ್ಳಿರಿ. ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವಪ್ರಭಾವವೆಂಬ ಎಂದಿಗೂ ಬಾಡದ ಜಯ ಮಾಲೆಯನ್ನು ಹೊಂದುವಿರಿ. ಯೌವನಸ್ಥರೇ, ಅದೇ ರೀತಿಯಾಗಿ ಹಿರಿಯರಿಗೆ ಅಧೀನರಾಗಿರಿ.
>
> ನೀವೆಲ್ಲರೂ ದೀನಮನಸ್ಸೆಂಬ ವಸ್ತ್ರದಿಂದ ಸೊಂಟಾಕಟ್ಟಿಕೊಂಡು ಒಬ್ಬರಿಗೊಬ್ಬರು ಸೇವೆ ಮಾಡಿರಿ. ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು.

ಹಿರಿಯರು ಹೇಗೆ ನಡಿಸುವರು ಎಂಬ ಪ್ರಶ್ನೆಯೊಂದಿಗೆ ನಿರ್ದಿಷ್ಟವಾಗಿ ವಿಚಾರಿಸುವಾಗ, ಪೇತ್ರನು ಮೊದಲು, ಒಬ್ಬ ಅಪೊಸ್ತಲನು (ಅದರಂತೆ ಒಬ್ಬ ಪ್ರಸಂಗಿಯು ಒಬ್ಬ ಹಿರಿಯನಾಗಿರಬಹುದು ಎಂದು ಪ್ರಕಟಿಸಿದನು ವಚನ 1). ಎರಡನೆಯದು, ಹಿರಿಯರಿಗೆ ನಿರ್ದಿಷ್ಟವಾದ ಕೆಲಸವು ಕೊಡಲ್ಪಟ್ಟಿರುವುದು ಎಂಬುದನ್ನು ಪ್ರಕಟಿಸಿದನು: ಅವರ ವಶದಲ್ಲಿರುವ ಮಂದೆಯನ್ನು ಕಾಯುವುದು (ವಚನ 2). ಈ ಮಂದೆಯು ಅವರ ವಶದಲ್ಲಿದ್ದರೂ, ಅದು ಅವರ "ಮಂದೆಯಾಗಿರುವದಿಲ್ಲ" ಎಂಬುದನ್ನು ಗಮನಿಸತಕ್ಕದ್ದು. ಕ್ರಿಸ್ತನು "ಹಿರೀ ಕುರುಬನು" ಆಗಿದ್ದಾನೆ (1 ಪೇತ್ರ 5:4); ಅದು ಆತನ ಮಂದೆಯಾಗಿರುತ್ತದೆ. ಹಿರಿಯರು ದೇವರು ಅವರಿಗೆ ಒಪ್ಪಿಸಿದಂಥದ್ದರ ಮನೆವಾರ್ತೆಯವರು ಮಾತ್ರವೇ ಆಗಿದ್ದಾರೆ. ಮೂರನೆಯದು, ತಮ್ಮ ಕೆಲಸವನ್ನು ಹೇಗೆ ಸಾಧಿಸಬೇಕೆಂಬುದನ್ನು ಹಿರಿಯರಿಗೆ ಹೇಳಲಾಗಿದೆ ಎಂದು ಪೇತ್ರನು ಹೇಳಿದನು (ವಚನಗಳು 2, 3). ಈ ವಾಕ್ಯಭಾಗದಲ್ಲಿ ಮೂರು ಜೋಡಿ ಮಾತುಗಳು, ಪ್ರತಿಯೊಂದು ನಕರಾತ್ಮಕ ಹಾಗೂ ಸಕಾರಾತ್ಮಕವಾದವುಗಳನ್ನೊಳಗೊಂಡು, ಹಿರಿಯರು ಹೇಗೆ ನಡಿಸಬೇಕೆಂಬುದನ್ನು ವಿವರಿಸುತ್ತದೆ: ಬಲತ್ಕಾರದಿಂದಲ್ಲ. ಇಷ್ಟ ಪೂರ್ವಕವಾಗಿ, ನೀಚವಾದ ದ್ರವ್ಯಾಶೆಯಿಂದಲ್ಲ, ಆದರೆ ಸಿದ್ಧಮನಸ್ಸಿನಿಂದ, ತಮ್ಮ ವಶದಲ್ಲಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿ ನಡೆಯ ಬೇಕು. ನಾಲ್ಕನೆಯದು, ಹಿರಿಯರು ತಮ್ಮ ಕರ್ತವ್ಯವನ್ನು ಚೆನ್ನಾಗಿ ಮಾಡಿದರೆ ಬಹುಮಾನ ಹೊಂದುವರು (ವಚನ 4). ಐದನೆಯದು, ಯೌವನಸ್ಥ ಕ್ರೈಸ್ತರು ಹಿರಿಯರಿಗೆ ಅಧೀನರಾಗ ಬೇಕು (ವಚನ 5). ಆರನೆಯದು, ಪ್ರತಿಯೊಬ್ಬರು ಪ್ರತಿಯೊಬ್ಬರ ಕಡೆಗೆ ದೀನತೆಯುಳ್ಳವರಾ ಗಿರಬೇಕು (ವಚನ 5). ಏಳನೆಯದು, ಪ್ರತಿಯೊಬ್ಬರು ದೇವರ ಮುಂದೆ ದೀನರಾಗಿರಬೇಕು (ವಚನ 6).

ತಮ್ಮ ವಶದಲ್ಲಿರುವವರ ಮೇಲೆ ಹಿರಿಯರು "ದೊರೆತನ ಮಾಡಬಾರದು" ಎಂಬುದರ

ಅರ್ಥವೇನು? ಇದರ ಅರ್ಥ ಅವರು ಸರ್ವಾಧಿಕಾರಿಗಳಂತೆ. ದೊರೆಗಳಂತೆ ಇಲ್ಲವೇ ಸೇನಾನಾಯಕರಂತೆ ನಡಿಸಬಾರದು ಎಂದಾಗುತ್ತದೆ. ಕೆಲವೊಂದು ಮಿತಿಯೊಳಗೆ ತಮ್ಮ ಅಧೀನತೆಯಲ್ಲಿರುವವರ ಮೇಲೆ ಸಂಪೂರ್ಣ ಅಧಿಕಾರವಿರುವ ಉಪಾಧ್ಯಾಯರಂತೆ ಇಲ್ಲವೇ ತಂದೆ ತಾಯಿಗಳಂತೆ ನಡಿಸ ಬಾರದು.

*ಹಿರಿಯರು ಸರ್ವಾಧಿಕಾರಿಗಳಲ್ಲ!* 1 ಪೇತ್ರ 5:5ರಲ್ಲಿ ಯೌವನಸ್ಥರು ಹಿರಿಯರಿಗೆ ಅಧೀನರಾಗಿರಬೇಕೆಂದು ಹೇಳಿದ್ದರೂ, ವಚನ 6ರಲ್ಲಿ ಪ್ರತಿಯೊಬ್ಬನು ಇತರ ಶಿಷ್ಯನ ಕಡೆಗೆ ದೀನಭಾವದಿಂದ ಇರಬೇಕೆಂದು ಹೇಳಲಾಗಿದೆ. ಒಂದು ಅರ್ಥದಲ್ಲಿ, ಹಿರಿಯರು ತಮಗಿಂತ ಚಿಕ್ಕವರಾದವರ ಕಡೆಗೆ ದೀನತೆಯುಳ್ಳವರಾಗಿರಬೇಕೆಂದು ಬೇರೆ ಮಾತಿನಲ್ಲಿ ಹೇಳ ಬಹುದು.

*ಹಿರಿಯರ ನಾಯಕತ್ವದ ಸಾಧನವು ಯಾವುದು?* ಅವರು, ಮೊದಲು, ಮಾದರಿಯಿಂದ ನಡಿಸಬೇಕು (1 ಪೇತ್ರ 5:3). ಇತರರು ಏನಾಗಿರಬೇಕು ಮತ್ತು ಮಾಡಬೇಕು ಎಂದು ಅವರು ಬಯಸುವರೋ. ಅವರು ಅದಾಗಿರಬೇಕು.

ಎರಡನೆಯದಾಗಿ, ಅವರು *ಬೋಧನೆಯಿಂದ* ಮತ್ತು ಸರಿಯಾದ ತತ್ವವು ಬೋಧಿ ಸಲ್ಪಡುವದನ್ನು ನೋಡುವದರಿಂದ ನಡಿಸಬೇಕು (ಅಪೊಸ್ತಲರ ಕೃತ್ಯಗಳು 20:28; 1 ತಿಮೊಥೆ 3:2; 5:7; ತೀತ 1:9-16). ಬೋಧನೆಗೆ ಜನರನ್ನು ಮಾರ್ಪಡಿಸುವ ಬಲವಿರುತ್ತದೆ. ಬೋಧಿಸುವ ಸಾಧನದಿಂದ ಹಿರಿಯರು ಅಪೇಕ್ಷಿತ ಬದಲಾವಣೆಗಳನ್ನು ಮಾಡಬಲ್ಲರು.

ಮೂರನೆಯದಾಗಿ, ಅವರು, *ಮನವೊಲಿಸುವದರಿಂದಲೂ ಪ್ರೋತ್ಸಾಹಿಸುವದ ರಿಂದಲೂ ನಡಿಸಬೇಕು.* ಹೊಸ ಒಡಂಬಡಿಕೆಯ ಸಭೆಯಲ್ಲಿ ಯಾರಿಗಾದರೂ ಯಾವುದೇ ಅಧಿಕಾರವಿದ್ದರೆ, ಅದು ಅಪೊಸ್ತಲರಿಗೆ ಇತ್ತು. ಇತರ ಅಪೊಸ್ತಲರಿಗಿದ್ದಂತೆ ಪೌಲನಿಗೆ ಬಹಳ ಅಧಿಕಾರವಿತ್ತು. ಆದರೆ ಅದು ಅವನ ಪತ್ರಿಕೆಗಳಲ್ಲಿ ಕಂಡು ಬಂದಂತೆ ಅವನು ನಡಿಸಿದ ರೀತಿ ಯನ್ನು ಗಮನಿಸಿರಿ: ಪೌಲನು ತನ್ನ ಪ್ರಭಾವದ ಅಧೀನತೆಯಲ್ಲಿದ್ದ ಸ್ಥಳಿಕ ಸಭೆಗಳನ್ನು ಒಳ್ಳೆ ಯದನ್ನು ಮಾಡಲು ಬೋಧಿಸಲು ಮತ್ತು ಮನವೊಲಿಸಲು ಹುಡುಕಿದನು. ಅದರಂತೆಯೇ ಹಿರಿಯರು ತಮ್ಮ ಜೋಪಾಸನೆಯಲ್ಲಿದ್ದ ಜನರನ್ನು ಒಳ್ಳೆಯದನ್ನು ಮಾಡುವದನ್ನು ಬೋಧಿ ಸುವದರಿಂದ ಮತ್ತು ಮನವೊಲಿಸಲು ಪ್ರಯತ್ನಿಸುವದರಿಂದ ನಡಿಸಿದರು.

ಹಿರಿಯರ ಮುಖ್ಯ ಜವಾಬ್ದಾರಿಕೆಯು ತೀರ್ಮಾನ ಮಾಡುವಂಥದ್ದಾಗಿರುವದಿಲ್ಲ. ಹೀಗಿ ದ್ದರೂ, ಸಭೆಗಾಗಿ ತೀರ್ಮಾನಗಳನ್ನು ಮಾಡಲು ಕರೆಯಲ್ಪಟ್ಟಿದ್ದಾರೆ, ಮೂಲವಾಗಿ ಅವರು ಎರಡು ಕ್ಷೇತ್ರಗಳಲ್ಲಿ ತೀರ್ಮಾನಗಳನ್ನು ಮಾಡುತ್ತಾರೆ.

*ಕೆಲವು ತೀರ್ಮಾನಗಳು ನಂಬಿಕೆಯ ಕ್ಷೇತ್ರದಲ್ಲಿರುತ್ತವೆ.* ಉದಾಹರಣೆಯಾಗಿ, ಸತ್ಯವು ಬೋಧಿಸಲ್ಪಡುತ್ತಿರುವುದೋ, ಸತ್ಯವನ್ನು ಪ್ರಸಂಗಿಸದೇ ಇರಬಹುದಾದ ಅತಿಥಿ ಪ್ರಸಂಗಿಯನ್ನು ಆಮಂತ್ರಿಸ ಬಹುದೋ, ಇಲ್ಲವೇ ಸತ್ಯವನ್ನು ಪ್ರಸಂಗಿಸದೇ ಇರುವ ಪ್ರಸಂಗಿಯನ್ನು ತೆಗೆದು ಹಾಕಬಹುದೋ ಎಂಬುದನ್ನು ಹಿರಿಯರು ತೀರ್ಮಾನಿಸ ತಕ್ಕದ್ದು. ಒಂದು ಅರ್ಥದಲ್ಲಿ, ಸತ್ಯವು ಏನಾಗಿರುತ್ತದೆ ಎಂಬುದನ್ನು ಕುರಿತು ಅವರು ತೀರ್ಮಾನಗಳನ್ನು ಮಾಡುವದಿಲ್ಲ; ಅದು ಅವರಿಗಾಗಿ ಬೈಬಲಿನಲ್ಲಿ ನಿರ್ಣಯಿಸಲ್ಪಟ್ಟಿದೆ. ವಿಶ್ವಾಸದ ವಿಷಯಗಳಲ್ಲಿ ಇಲ್ಲವೇ ಅಗತ್ಯತೆಯಲ್ಲಿ ಕೇವಲ ಸತ್ಯವು ಬೋಧಿಸಲ್ಪಡುವದನ್ನು ನಿಶ್ಚಿತ ಪಡಿಸಿಕೊಳ್ಳುವುದು ಅವರ ಕೆಲಸವಾಗಿರುತ್ತದೆ.

*ಇತರ ತೀರ್ಮಾನಗಳು ಅಭಿಪ್ರಾಯದ ಕ್ಷೇತ್ರದಲ್ಲಿ ಮಾಡಲ್ಪಡುವವು.* ಉದಾಹರಣೆಯಾಗಿ, ಹಿರಿಯರು ವಾಹನ ನಿಲುಗಡೆ ಎಲ್ಲಿರಬೇಕು ಎಂಬುದನ್ನು ನಿರ್ಣಯಿಸಬೇಕು. ಅಭಿಪ್ರಾಯದ ಕ್ಷೇತ್ರಗಳಲ್ಲಿ ಸಂಬಂಧಿಸಿದ ವಿಷಯಗಳನ್ನು ಕುರಿತು ಅವರ ಹೆಚ್ಚಾದ ತೀರ್ಮಾನಗಳು ಇರುವವು.

ಅಭಿಪ್ರಾಯದ ಮೇಲಿನ ತೀರ್ಮಾನದಲ್ಲಿ ಹಿರಿಯರು ಒಂದು ತೀರ್ಮಾನ ಮಾಡಿದ

ನಂತರ, ಆ ತೀರ್ಮಾನವನ್ನು ಸ್ವೀಕರಿಸಲಿಕ್ಕೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವಂತೆ ಸದಸ್ಯರಿಗೆ ಬೋಧಿಸುವುದು ಮತ್ತು ಮನವೊಲಿಸುವುದು ಅವರ ಮುಂದಿನ ಕಾರ್ಯವಾಗಿರುತ್ತದೆ. ಅಭಿಪ್ರಾಯದ ಕ್ಷೇತ್ರದಲ್ಲಿ ತಾವು ಮಾಡಿದ ನಿರ್ಣಯವನ್ನು ಸದಸ್ಯರಲ್ಲಿ ಹೆಚ್ಚಾದವರು ಸ್ವೀಕರಿಸಲಿಕ್ಕೆ ಹಿರಿಯರು ಮನವೊಲಿಸದವರಾಗಿದ್ದರೆ, ಆಗ ಅವರು ಆ ಸಮಯಕ್ಕಾಗಿ ಯೋಜನೆಯನ್ನು ಕೈಬಿಡಬೇಕು ಇಲ್ಲವೇ ನಿರ್ಣಯವನ್ನು ಪುನಃ ವಿಚಾರಿಸತಕ್ಕದ್ದು. ಅಭಿಪ್ರಾಯದ ವಿಷಯಗಳಲ್ಲಿ ಕುರುಬರು ಕುರಿಗಳನ್ನು ಅನುಸರಿಸಲು ಹೊಂದಿಕೊಳ್ಳದಿದ್ದರೆ, ಆಗ ಅದು ಫಲವಿಲ್ಲದ್ದಾಗುವುದು ಹಾಗೆಯೇ ನಿರಾಶಾದಾಯಕವಾದದ್ದಾಗುವುದು, ಯಾಕೆಂದರೆ ಆ ಮಾರ್ಗದಲ್ಲಿ ಮುಂದುವರಿಯಲಾಗದ್ದಾಗುವುದು.

## ಮುಕ್ತಾಯ

ಹಿರಿಯರು ದೇವರು ತಮಗೆ ಕೊಟ್ಟ ಕಾರ್ಯಗಳನ್ನು *ದೇವರು ನಿರ್ದೇಶಿಸಿದ ರೀತಿಯಲ್ಲಿ ಬುದ್ಧಿವಂತಿಕೆಯಿಂದ ನೆರವೇರಿಸಿದರೆ,* ಮತ್ತು ಸದಸ್ಯರು, ಹೊಸ ಒಡಂಬಡಿಕೆಯಲ್ಲಿ ಬೋಧಿಸಲ್ಪಟ್ಟಂತೆ ಹಿರಿಯರ ಕಡೆಗೆ ವರ್ತಿಸಿದರೆ, ಗಂಭೀರವಾದ ಸಮಸ್ಯೆಗಳು ಎಂದೂ ಉದ್ಭವಿಸುವದಿಲ್ಲ.